ಹಿಂದೆ ದೂಡಿ ಹಿಂದಿನ ಜನ್ಮದ ನೆನಪುಗಳನ್ನೂ ಪರದೆಯ ಮೇಲೆ ನೋಡಬಹುದು' ಅಂದ.

'ವಾಹ್' ಅಂದೆವು ನಾನು ಮತ್ತು ದಿಲೀಪ್. ಒಳ್ಳೇ ಆಳಕ್ಕೇ ಇಳಿದಿದ್ದಾನೆ ಲಖನ್ ಅನ್ನಿಸಿತು. ಅಮಿತ್ ಥಟ್ಟನೆ ಪ್ರತಿಕ್ರಿಯೆ ತೋರಲಿಲ್ಲ. ಬದಲಾಗಿ ಉತ್ತರಿಸಿದ 'ಕಲ್ಪನೆ ಅಮೋಘವಾಗಿದೆ. ಈ ದಿಶೆಯಲ್ಲಿ ಪ್ರಯೋಗಗಳು ನಡೆದರೆ ಸ್ಮೃತಿದೋಷ ಇರುವ ರೋಗಿಗಳಿಗೂ ಇದು ವರದಾನವಾಗುತ್ತದೆ. ಆಸಿಮೋವ್ ಇಂಥದೇ ಒಂದು ಕಲ್ಪನೆ ಮಾಡಿಕೊಂಡು 'ಸ್ವಪ್ನದರ್ಶಿ' ಅಂತ ಒಂದು ಕಥೆ ಬರೆದಿದ್ದರು. ಅದರಲ್ಲಿ ಕಥಾನಾಯಕ ತನ್ನ ಸುಂದರ ಕನಸುಗಳನ್ನು ಮಾರಿ ಸಪ್ನೋಂಕಾ ಸೌದಾಗರ್ ಆಗಿಬಿಟ್ಟಿದ್ದ. ಓದಿದ್ದೀರಾ ಯಾರಾದರೂ ಆ ಕಥೆಯನ್ನ?' ಕೇಳಿದ.

ಇಲ್ಲ, ನಾವಾರೂ ಓದಿರಲಿಲ್ಲ. ಗೋಣು ಅಲ್ಲಾಡಿಸಿದೆವು.

'ಅದನ್ನು ಓದಿದರೆ ಲಖನ್ ಕಥೆಗೆ ಕ್ಲೂ ಸಿಗುತ್ತದೆ' ಎಂದ.

ಲಖನ್ ಇದಕ್ಕೆ ಒಪ್ಪಲಿಲ್ಲ. 'ಊಂಹೂಂ. ನನ್ನ ಕಥೆ ಪೂರ್ಣಗೊಂಡ ಮೇಲೆಯೇ ನಾನದನ್ನು ಓದುವವ. ಇಲ್ಲದಿದ್ದರೆ ನನ್ನ ಸ್ವಂತಿಕೆ ಹೋಗಿಬಿಡುತ್ತದೆ' ಎಂದು ವಾದಿಸಿದ.

ಅವನ ವಾದದಲ್ಲೂ ಹುರುಳಿತ್ತು. ಆಸಿಮೋವ್ ಅವರ ಕಥೆ ಓದದೆಯೇ ಮುಂದೊಂದು ದಿನ ಲಖನ್ ತನ್ನ ಕಥೆ 'ಸ್ಮೃತಿದರ್ಶಕ' ಬರೆದು ಮುಗಿಸಿದ. ಕಾಲ್ಪನಿಕ ಹತ್ಯಾಕಾಂಡವೊಂದರ ರಹಸ್ಯ ಬಯಲು ಮಾಡುವ ವಸ್ತು ಇರುವ ಕಥೆಯದು. ಪ್ರಸಿದ್ಧ ವಿಜ್ಞಾನ ಪತ್ರಿಕೆಯೊಂದರಲ್ಲಿ ಪ್ರಕಟವಾಗಿ ಓದುಗರಿಂದ ಅಪಾರ ಮೆಚ್ಚುಗೆ ಪಡೆಯಿತು.

ಈಗ ನನ್ನ ಪಾಳಿ ಬಂತು.

ಕಥೆಗಳು ಸಾಕಷ್ಟಿದ್ದವು, ಆದರೆ ಯಾವವೂ ಪ್ರಾರಂಭಿಕ ಹಂತವನ್ನೇ ದಾಟಿರಲಿಲ್ಲ. ವಿಚಾರಗಳು ಕಲ್ಪನೆಗಳು ಹದವಾಗಿ ಸಂಮಿಶ್ರಗೊಂಡು ಕಥೆ ಪೂರ್ಣಗೊಂಡು ಹೊರಬರಬೇಕೆಂದರೆ ಅದೊಂದು ಪ್ರಸವ ಪ್ರಸಂಗವೇ ಸರಿ. ಈ ಅಮಿತ್‌ನಿಗೆ ಇದೆಲ್ಲ ಕರತಲಾಮಲಕ. ನನ್ನ ವಿಚಾರಗಳಿಗೆ ಕಲ್ಪನೆಗಳಿಗೆ ಸರಿಯಾದ ರೂಪು ಕೊಟ್ಟೇ ಕೊಡುತ್ತಾನೆಂದು ಹೇಳತೊಡಗಿದೆ. ಈ ವೇಳೆಯಲ್ಲಿ ಲಖನ್ ಮತ್ತು ದಿಲೀಪ್ ತಮ್ಮ ತಮ್ಮ ಕಥಾಗುಂಗಿನಲ್ಲಿದ್ದರು. ಅಮಿತ್ ಸರಿಯಾಗಿ ಸ್ಪಂದಿಸಿ ನನ್ನ ಮೂರು ಕಥೆಗಳಿಗೆ ಒಳ್ಳೊಳ್ಳೆಯ ಸಾಧ್ಯತೆಗಳನ್ನು ಒದಗಿಸಿದ. ಕೆಲವೇ ದಿನಗಳಲ್ಲಿ ನಾನವುಗಳನ್ನು ಪೂರ್ಣಮಾಡಬಲ್ಲೆ ಎಂಬ ಆತ್ಮವಿಶ್ವಾಸವೂ ಮೂಡಿತು. ಅಮಿತ್‌ಗೆ ಧನ್ಯವಾದ ಹೇಳಿದೆ.

ಆಗಾಗ್ಗೆ ಗ್ಲಾಸುಗಳನ್ನು ಎತ್ತುತ್ತಿದ್ದುದರಿಂದ ಸಮಯದ ಪರಿವೆಯೇ ಇರಲಿಲ್ಲ. ಕೊನೆಯದಾಗಿ ಅಮಿತ್‌ನ ಪಾಳಿ ಬಂದಾಗ ಹನ್ನೊಂದು ದಾಟಿತು. ಅಮಿತ್ ಶುರು ಮಾಡಿದ 'ಈ ಕಥೆ ಸರಕು ಸಾಗಣೆ ಕುರಿತಾದದ್ದು' ಎಂದಾಗ ನಾವು ಒಬ್ಬರ ಮುಖವನ್ನೊಬ್ಬರು ನೋಡಿಕೊಂಡೆವು. ಸರಕು ಸಾಗಣೆಯಂಥ ಸಾಧಾರಣ ವಿಷಯ ಕುರಿತು ವೈಜ್ಞಾನಿಕ ಕಥೆಯನ್ನೇನು ಬರೆಯಬೇಕೆನ್ನುತ್ತಾನಿವ? ನಮ್ಮೊಳಗಿನ ಪ್ರಶ್ನೆ. ನಮ್ಮ ಮನಸ್ಸುಗಳನ್ನು ಅರ್ಥ ಮಾಡಿಕೊಂಡವನೇ 'ಆಯ್ ಮೀನ್ ಪದಾರ್ಥ ಸ್ಥಾನಾಂತರ ಮಟೀರಿಯಲ್ ಟ್ರಾನ್ಸ್‌ಮಿಶನ್ (ಎಮ್.ಟಿ)' ಅಂತ ವಿವರಿಸಿದ. 'ಒಮ್ಮೊಮ್ಮೆ ಇಂಗ್ಲಿಷ್ ಪದಗಳನ್ನುಪಯೋಗಿಸಿದಾಗಲೇ ವಿಷಯಕ್ಕೆ ಗಾಂಭೀರ್ಯತೆ ಪ್ರಾಪ್ತವಾಗೋದು' ಎಂದು ಹೇಳಿದಾಗ ನಾವು ಮತ್ತೆ ಒಬ್ಬರೊಬ್ಬರು ಮುಖ ನೋಡಿಕೊಂಡೆವು. ನಮಗೆ ವಿಷಯ ತಿಳಿದುಕೊಳ್ಳುವ ಕುತೂಹಲವಿತ್ತು. 'ಯಾವುದೇ ಸರಕನ್ನು, ವಸ್ತುಗಳನ್ನು, ಪದಾರ್ಥಗಳನ್ನು ಹಾಗೆಯೇ ಪ್ರಾಣಿ ಪಕ್ಷಿಗಳನ್ನು ಆನಂತರ ಮಾನವರನ್ನು ಕೂಡ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಇಮೇಲ್‌ನಂತೆ ಕಳಿಸುವಂತಿದ್ದರೆ ಎಷ್ಟು ಅನುಕೂಲ ಅಲ್ಲವೇ?'

ಲಖನ್ 'ಓ!...' ಎಂದು ಉಚ್ಚಸ್ಥಾಯಿಯಲ್ಲಿ ಸ್ವರ ತೆಗೆದು 'ದೇವಾನು ದೇವತೆಗಳು ಅದರಲ್ಲೂ